KABC030754702021

**ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ**
**ಬೆಂಗಳೂರು ನಗರ**

ಉಪಸ್ಥಿತರು

**ಶ್ರೀ.ರಂಗೇಗೌಡ .ಸಿ**

ಬಿ.ಎ.ಎಲ್‌ಎಲ್. ಎಲ್‌ಎಲ್.ಬಿ.,
ಮುಖ್ಯ ಮಹಾನಗರ ದಂಡಾಧಿಕಾರಿ,
ಬೆಂಗಳೂರು ನಗರ

**8 ನೇ ತಾರೀಖು ಮೇ, 2026**

**ಸಿಸಿ ಸಂಖ್ಯೆ – 28309/2021**

| | | |
|---|---|---|
| **ದೂರುದಾರರು** | : | ರಾಜ್ಯದ ಪರ ತಿಲಕನಗರ ಪೊಲೀಸ್ ಠಾಣೆ,<br>ಬೆಂಗಳೂರು ನಗರ<br>(ಹಿ.ಸ.ಸ. ಅಭಿಯೋಜಕರು) |

**– ವಿರುದ್ಧ –**

| | | |
|---|---|---|
| **ಆರೋಪಿ/ಗಳು:** | : | ಟಿ ನಟರಾಜನ್ ಬಿನ್ ಲೇ ತೀಕರಂ<br>65 ವರ್ಷ, ನಂ.6, 4ನೇ ಅಡ್ಡರಸ್ತೆ<br>ಆರ್ ಎ ರಸ್ತೆ, ಈಜಿಪುರ, ವಿವೇಕನಗರ<br>ಬೆಂಗಳೂರು 560 047<br><br>(ಶ್ರೀ ಎಸ್ ಸುರೇಶ್ ಕುಮಾರ್, ವಕೀಲರು) |

**ದಂಡ ಪ್ರಕ್ರಿಯಾ ಸಂಹಿತೆ ಕಲಂ 355 ರಡಿ ವಿವರ**

| | | |
|---|---|---|
| ಅಪರಾಧದ ದಿನಾಂಕ | :- | 01-01-1990 ರಿಂದ 17-04-2021 |
| ಫಿರ್ಯಾದಿ ಮಾಡಲಾದ ಅಪರಾಧಗಳು | :- | ಭಾ.ದಂ.ಸಂ. ಕಲಂ. 498ಎ |
| ಆರೋಪಿ/ಗಳು ಆರೋಪಗಳನ್ನು ಒಪ್ಪಿಕೊಂಡಿದ್ದಾರೆಯೇ | :- | ಇಲ್ಲ |
| ಅಂತಿಮ ಆದೇಶ | :- | ಆರೋಪಿಯನ್ನು ಖುಲಾಸೆಗೊಳಿಸಿದೆ |
| ತೀರ್ಪಿನ ದಿನಾಂಕ | :- | 08/05/2026 |

**– ತೀರ್ಪು –**

ಬೆಂಗಳೂರು ನಗರದ ತಿಲಕನಗರ ಪೊಲೀಸ್ ಠಾಣೆಯ ಆರಕ್ಷಕ ನಿರೀಕ್ಷಕರು ಆರೋಪಿ ವಿರುದ್ಧ ಭಾ.ದಂ.ಸಂ.ಕಲಂ.498(ಎ) ರಡಿ ದಂಡನೀಯ ಅಪರಾಧ ಮಾಡಿದ್ದಾರೆಂದು ಆರೋಪಿಸಿ ಸಲ್ಲಿಸಿರುವ ಅಂತಿಮ ವರದಿಯ ಆಧಾರದ ಮೇಲೆ ಈ ಪ್ರಕರಣವನ್ನು ದಾಖಲಿಸಲಾಗಿರುತ್ತದೆ.

2. ಅಭಿಯೋಜನೆಯ ಪ್ರಕರಣದ ಸಾರಾಂಶವೇನೆಂದರೆ ತಿಲಕನಗರದ ಬಿಟಿಬಿ ಏರಿಯಾ, ಕೆಹೆಚ್‌ಬಿ ಕ್ವಾಟ್ರಸ್, 30ನೇ ಸಿ ಅಡ್ಡರಸ್ತೆ, 27ನೇ ಮುಖ್ಯರಸ್ತೆಯಲ್ಲಿರುವ ಮನೆ ನಂ.08 ರಲ್ಲಿ ಚಾಸಾ 1 ರವರು ವಾಸವಾಗಿರುತ್ತಾರೆ. ಚಾಸಾ 1 ರವರು ಆರೋಪಿಯನ್ನು ಪ್ರೀತಿಸಿ ದಿನಾಂಕ 29-03-1995 ರಂದು ಬನ್ನೇರುಘಟ್ಟ,

ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿಯ ಶ್ರೀ ಚಂಪಕಧಾಮಸ್ವಾಮಿ ದೇವಸ್ಥಾನದಲ್ಲಿ ಹಿಂದು ಸಂಪ್ರದಾಯದಂತೆ ವಿವಾಹವಾಗಿದ್ದು, ಚಾಸಾ 1 ರವರಿಗೆ ಆರೋಪಿಯಿಂದ ಇಬ್ಬರು ಹೆಣ್ಣುಮಕ್ಕಳಿರುತ್ತಾರೆ. ಆರೋಪಿಯು ಚಾಸಾ1 ರವರೊಂದಿಗೆ ವಿವಾಹವಾದ ಕೆಲವು ದಿನಗಳ ಮಟ್ಟಿಗೆ ಅನ್ಯೋನ್ಯವಾಗಿ ಚೆನ್ನಾಗಿ ನೋಡಿಕೊಂಡಿದ್ದು, ತದನಂತರದಲ್ಲಿ ಆರೋಪಿಯು ಚಾಸಾ 1 ರವರ ಮನೆಗೆ ಬಾರದೆ, ಆಗಾಗ್ಗೆ ಮನೆಗೆ ಬಂದು ಚಾಸಾ 1 ರವರನ್ನು ಹೊಡೆಯುವುದು, ಬೈಯುವುದು ಮಾಡುತ್ತಾ ಮಕ್ಕಳ ಪಾಲನೆ ಪೋಷಣೆಗೆ ಸರಿಯಾದ ಖರ್ಚುವೆಚ್ಚವನ್ನು ನೋಡಿಕೊಳ್ಳದೆ ಚಾಸಾ 1 ರವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡಿರುತ್ತಾರೆಂದು ಚಾಸಾ.1 ರವರು ತಿಲಕನಗರ ಪೊಲೀಸ್ ಠಾಣೆಗೆ ಪ್ರಥಮ ಮಾಹಿತಿ ನೀಡಿರುತ್ತಾರೆ. ಅದನ್ನು ಸ್ವೀಕರಿಸಿದ ಠಾಣಾಧಿಕಾರಿಗಳು ಮೊಕದ್ದಮೆ ಸಂಖ್ಯೆ.60/2021ನ್ನು ದಾಖಲಿಸಿರುತ್ತಾರೆ.

3. ನಂತರ ತನಿಖಾಧಿಕಾರಿಯವರು ಪ್ರಕರಣದ ಸಂಪೂರ್ಣ ತನಿಖೆ ಕೈಗೊಂಡು ಆರೋಪಿ ವಿರುದ್ಧ ಮೇಲ್ಕಂಡ ಆರೋಪಗಳಿಗೆ ಈ ನ್ಯಾಯಾಲಯಕ್ಕೆ ಅಂತಿಮ ವರದಿ ಸಲ್ಲಿಸಿರುತ್ತಾರೆ. ಆರೋಪಿ ವಿರುದ್ಧ ಆಪಾದಿಸಿದ ಆರೋಪಗಳಿಗೆ ಸಂಜ್ಞೆ ತೆಗೆದುಕೊಂಡು ಸಮನ್ಸ್ ಹೊರಡಿಸಿರುತ್ತದೆ. ಸಮನ್ಸಿಗನುಗುಣವಾಗಿ

ಆರೋಪಿ ನ್ಯಾಯಾಲಯಕ್ಕೆ ಹಾಜರಾಗಿ ತಮ್ಮ ವಕೀಲರ ಮೂಲಕ ಸೂಕ್ತ ಅರ್ಜಿ ಸಲ್ಲಿಸಿ ಜಾಮೀನು ಪಡೆದುಕೊಂಡಿರುತ್ತಾರೆ.

**4.** ಮುಖ್ಯ ಮಹಾನಗರ ದಂಡಾಧಿಕಾರಿಗಳವರ ನ್ಯಾಯಾಲಯ ಬೆಂಗಳೂರು ಇವರ ಅಧಿಸೂಚನೆ ಸಂಖ್ಯೆ: ಎಡಿಎಮ್‌-1-04-2024 ದಿನಾಂಕ 07.03.2024 ರ ಪ್ರಕಾರ ಪ್ರಕರಣವು ಈ ನ್ಯಾಯಾಲಯಕ್ಕೆ ವರ್ಗಾವಣೆಯಾಗಿರುತ್ತದೆ.

5. ಅಂತಿಮ ವರದಿಯ ಪ್ರತಿಯನ್ನು ಆರೋಪಿಗೆ ದಂ.ಪ್ರ.ಸಂ. ಕಲಂ 207 ರಡಿಯಲ್ಲಿ ನೀಡಲಾಯಿತು. ಉಭಯ ಪಕ್ಷಗಾರರ ವಾದ ಆಲಿಸಿದ ನಂತರ ಆರೋಪಿ ವಿರುದ್ಧದ ಅಪರಾಧಗಳಿಗಾಗಿ ಆರೋಪಣೆಯನ್ನು ರಚಿಸಿ, ಓದಿ ವಿವರಿಸಲಾಗಿ, ಆರೋಪಿ ಅದನ್ನು ನಿರಾಕರಿಸಿ ವಿಚಾರಣೆ ಆಗಬೇಕೆಂದು ಕೋರಿದ ಪ್ರಯುಕ್ತ ಪ್ರಕರಣವನ್ನು ವಿಚಾರಣೆಗೆ ನಿಗದಿಪಡಿಸಲಾಗಿರುತ್ತದೆ.

**6.** ಅಭಿಯೋಜನೆಯು ಆರೋಪಿ ವಿರುದ್ದ ಮಾಡಿದ ಆರೋಪಣೆಗಳನ್ನು ಸಾಬೀತುಪಡಿಸಲು ತಮ್ಮ ಪರವಾಗಿ ಪ್ರಥಮ ಮಾಹಿತಿದಾರರಾದ ಚಾಸಾ.1- ಕುಮಾರಿರವರನ್ನು ಫ್ರಾ.ಸಾ.1 ಎಂದು ವಿಚಾರಣೆ ಮಾಡಿ ಅವರ ಮೂಲಕ ನಿ.ಪಿ.1 ರಿಂದ ನಿ.ಪಿ.3 ದಾಖಲೆಗಳನ್ನು ಗುರುತಿಸಿಕೊಂಡಿದ್ದಾರೆ. ವಿಚಾರಣೆ

ಮಾಡಲಾದ ಘಟನೆಯಿಂದ ನೊಂದ ಪ್ರಾ.ಸಾ.1 ರವರು ಅಭಿಯೋಜನೆ ಪ್ರಕರಣವನ್ನು ಬೆಂಬಲಿಸದೆ ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಉಳಿದ ಸಾಕ್ಷಿದಾರರ ವಿಚಾರಣೆ ಮಾಡುವುದರಿಂದ ಯಾವುದೇ ಪ್ರಯೋಜನವಿಲ್ಲವೆಂದು ಪರಿಗಣಿಸಿ ಅಭಿಯೋಜನೆಯವರ ಮನವಿಯನ್ನು ತಿರಸ್ಕರಿಸಿ ಉಳಿದ ಸಾಕ್ಷಿದಾರರನ್ನು ವಿಚಾರಣೆಯಿಂದ ಕೈಬಿಟ್ಟು ಅಭಿಯೋಜನೆಯ ಸಾಕ್ಷ್ಯವನ್ನು ಮುಕ್ತಾಯಗೊಳಿಸಿದೆ.

**7.** ಪ್ರಾ.ಸಾ.1 ರವರ ಸಾಕ್ಷ್ಯವನ್ನು ಕೂಲಂಕುಷವಾಗಿ ಪರಿಶೀಲಿಸಲಾಗಿ ಅದರಲ್ಲಿ ಆರೋಪಿ ತಪ್ಪಿತಸ್ಥರೆಂದು ಕಾಣಿಸುವ ಯಾವುದೇ ಅಂಶಗಳು ಗೋಚರಿಸದ ಹಿನ್ನೆಲೆಯಲ್ಲಿ ಆರೋಪಿಯನ್ನು ದಂ.ಪ್ರ.ಸಂ.ಕಲಂ.313 ರಡಿ ಹೇಳಿಕೆಯನ್ನು ದಾಖಲಿಸುವುದರಿಂದ ವಿನಾಯತಿ ನೀಡಲಾಗಿದೆ.

**8.** ಉಭಯ ಪಕ್ಷಗಾರರ ಪರ ವಾದವನ್ನು ಆಲಿಸಲಾಯಿತು. ನ್ಯಾಯಾಲಯದಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಮತ್ತು ಕಡತವನ್ನು ಪರಿಶೀಲನೆ ಮಾಡಿದ ನಂತರ ಪರಿಗಣನೆಗೆ ಈ ಕೆಳಗಿನ ಅಂಶ ಉದ್ಭವಿಸಿವೆಃ

1. ಅಭಿಯೋಜನೆಯು ದಿನಾಂಕ 29-03-1995 ರಂದು ಆರೋಪಿಯಾದ ನಿಮ್ಮ ಮತ್ತು ಚಾಸಾ 1 ರವರ ಮದುವೆ ಬನ್ನೇರುಘಟ್ಟದ ಆನೇಕಲ್ ತಾಲ್ಲೂಕು, ಜಿಗಣಿ ಹೋಬಳಿಯ ಶ್ರೀ

ಚಂಪಕಧಾಮಸ್ವಾಮಿ ದೇವಸ್ಥಾನದಲ್ಲಿ ಹಿಂದೂ ಸಂಪ್ರದಾಯದಂತೆ ವಿವಾಹವಾಗಿದ್ದು, ವಿವಾಹದ ನಂತರ ಚಾಸಾ 1 ರವರು ಆರೋಪಿಯಾದ ನಿಮ್ಮೊಂದಿಗೆ ತಿಲಕನಗರದ ಬಿಟಿಬಿ ಏರಿಯಾದ ಕೆಹೆಚ್‌ಬಿ ಕ್ವಾಟ್ರಸ್ 30ನೇ ಸಿ ಅಡ್ಡರಸ್ತೆಯ 27ನೇ ಮುಖ್ಯರಸ್ತೆಯಲ್ಲಿರುವ ಮನೆ ನಂ.08 ರಲ್ಲಿ ವಾಸವಾಗಿದ್ದು, ವಿವಾಹವಾದ ಕೆಲವು ದಿನಗಳ ನಂತರ ಆರೋಪಿಯಾದ ನೀವು ಚಾಸಾ 1 ರವರ ಮನೆಗೆ ಬಾರದೆ, ಆಗಾಗ್ಗ ಮನೆಗೆ ಬಂದು ಚಾಸಾ 1 ರವರನ್ನು ಹೊಡೆಯುವುದು, ಬೈಯ್ಯುವುದು ಮಾಡುತ್ತಾ ಮಕ್ಕಳ ಪಾಲನೆ ಪೋಷಣೆಗೆ ಸರಿಯಾದ ಖರ್ಚುವೆಚ್ಚವನ್ನು ನೋಡಿಕೊಳ್ಳದೇ ಚಾಸಾ 1 ರವರಿಗೆ ಮಾನಸಿಕವಾಗಿ ಮತ್ತು ದೈಹಿಕವಾಗಿ ಹಿಂಸೆ ನೀಡುತ್ತಿದ್ದು, ಆ ಮೂಲಕ ಭಾ.ದಂ.ಸಂ. ಕಲಂ 498ಎ ರಡಿ ಅಪರಾಧವನ್ನೆಸಗಿದ್ದಾರೆಂದು ಅಭಿಯೋಜನೆಯು ನಿಸ್ಸಂಶಯವಾಗಿ ರುಜುವಾತು ಪಡಿಸಿದ್ದಾರೆಯೆ?

2. ಏನು ಆದೇಶ?

**9.** ಅಭಿಯೋಜನೆಯವರು ನ್ಯಾಯಾಲಯಕ್ಕೆ ಹಾಜರುಪಡಿಸಿದ ಸಾಕ್ಷ್ಯಗಳ ಆಧಾರದ ಮೇಲೆ ಮೇಲ್ಕಂಡ ಅಂಶಗಳನ್ನು ಈ ಕೆಳಗಿನಂತೆ ಉತ್ತರಿಸುತ್ತೇನೆ.

ಅಂಶ 1 : ನಕಾರಾತ್ಮಕವಾಗಿ

ಅಂಶ 2 : ಅಂತಿಮ ಆದೇಶದಂತೆ ಈ ಕೆಳಗಿನ

## ಕಾ ರ ಣ ಗ ಳಿ ಗಾ ಗಿ

**10. ಅಂಶ.1** – ಅಭಿಯೋಜನೆಯು ತಮ್ಮ ಪ್ರಕರಣವನ್ನು ರುಜುವಾತುಪಡಿಸಲು ಘಟನೆಯಲ್ಲಿ ನೊಂದ ಪ್ರಥಮ ಮಾಹಿತಿದಾರರಾದ ಕುಮಾರಿರವರನ್ನು ಫ್ರಾಸಾ.1 ಎಂದು ವಿಚಾರಣೆಗೊಳಪಡಿಸಿದೆ. ಫ್ರಾಸಾ 1 ರವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 29–03–1995 ರಂದು ಬನ್ನೇರುಘಟ್ಟದಲ್ಲಿರುವ ಚಂಪಕಧಾಮ ದೇವಸ್ಥಾನದಲ್ಲಿ ಹಿಂದೂ ಸಂಪ್ರದಾಯದಂತೆ ತನ್ನ ಹಾಗೂ ಆರೋಪಿಯ ಮದುವೆ ಆಗಿರುತ್ತದೆ. 2021 ನೇ ಸಾಲಿನಲ್ಲಿ ಆರೋಪಿಯು ಸರಿಯಾಗಿ ಮನೆಗೆ ಬಾರದ ಕಾರಣ ಪೋಲೀಸ್ ಠಾಣೆಗೆ ಹೋಗಿ ಆರೋಪಿಯನ್ನು ಕರೆಸಿ ಬುದ್ದಿ ಹೇಳುವಂತೆ ಠಾಣೆಗೆ ಹೋಗಿದ್ದಾಗ ಪೋಲೀಸರು ಕೆಲವು ದಾಖಲೆಗಳಿಗೆ ತನ್ನ ಸಹಿಗಳನ್ನು ಪಡೆದಿರುತ್ತಾರೆ. ತಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ, ಆರೋಪಿಯು ತನಗೆ ಯಾವುದೇ ದೈಹಿಕ ಹಾಗೂ ಮಾನಸಿಕ ಕಿರುಕುಳ ನೀಡಿರುವುದಿಲ್ಲ ಎಂದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

11. ಪ್ರಾಜ್ಞ ಹಿ.ಸ.ಸ.ಅಭಿಯೋಜಕರು ಪ್ರಾಸಾ.1 ರವರನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಒಳಪಡಿಸಿರುತ್ತಾರೆ. ಅವರು ತಮ್ಮ ಪಾಟೀ ಸವಾಲಿನಲ್ಲಿ ಅಭಿಯೋಜಕರು ಮಾಡಿದ ಎಲ್ಲಾ ಸಲಹೆಗಳನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ. ಪ್ರಾಸಾ.1 ಮತ್ತು ಆರೋಪಿ ರಾಜಿ ಮಾಡಿಕೊಂಡಿದ್ದೇವೆ ಎಂಬ ಸಲಹೆಯನ್ನು ಒಪ್ಪಿಕೊಂಡಿರುತ್ತಾರೆ. ರಾಜಿ ಮಾಡಿಕೊಂಡಿರುವ ಕಾರಣ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇವೆ ಎಂಬ ಸಲಹೆಯನ್ನು ಸಂಪೂರ್ಣವಾಗಿ ಅಲ್ಲಗಳೆದಿರುತ್ತಾರೆ.

12. ಅಭಿಯೋಜನೆಗೆ ಆರೋಪಿ ವಿರುದ್ಧ ಮಾಡಿದ ಆರೋಪಗಳನ್ನು ನಿಸ್ಸಂಶಯವಾಗಿ ಸಾಬೀತುಪಡಿಸಲು ಪ್ರಾಸಾ.1 ರವರ ಸಾಕ್ಷ್ಯವು ಬಹಳ ಪ್ರಮುಖವಾಗಿರುತ್ತದೆ. ಆದರೆ ಆಪಾದಿಸಿದ ಘಟನೆಯಲ್ಲಿ ಪ್ರಥಮ ಮಾಹಿತಿದಾರರಾದ ಮತ್ತು ನೊಂದ ಸದರಿ ಸಾಕ್ಷಿಯು ಅಭಿಯೋಜನೆ ಪ್ರಕರಣಕ್ಕೆ ಪೂರಕವಾಗಿ ಮತ್ತು ನಿಪಿ.1 ಮತ್ತು 2ಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿದಿರುವುದಿಲ್ಲ. ಅಲ್ಲದೇ ಅಭಿಯೋಜನೆಯ ಪಾಟೀ ಸವಾಲಿನಲ್ಲಿ ಘಟನೆಯಲ್ಲಿ ನೊಂದ ಪ್ರಥಮ ಮಾಹಿತಿದಾರರಾದ ಪ್ರಾಸಾ.1 ರವರಿಗೆ ಆರೋಪಿ ಹೊಡೆಯುವುದು, ಬೈಯುವುದು, ಮನೆ ಸಂಸಾರಕ್ಕೆ ಸರಿಯಾದ ಖರ್ಚು ವೆಚ್ಚಗಳನ್ನು ನೋಡಿಕೊಳ್ಳದೇ ದೈಹಿಕವಾಗಿ ಮತ್ತು ಮಾನಸಿಕವಾಗಿ ಹಿಂಸೆ ನೀಡಿರುತ್ತಾನೆ ಎಂಬ

ಸಲಹೆಗಳನ್ನು ಸಂಪೂರ್ಣವಾಗಿ ಅಲ್ಲಗಳೆದು ಅಭಿಯೋಜನೆ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯವನ್ನು ನುಡಿದಿರುತ್ತಾರೆ.

13. ಅಭಿಯೋಜನೆಯೂ ಸಹ ಆರೋಪಿ ವಿರುದ್ಧ ಆರೋಪಿಸಲಾದ ಆರೋಪವನ್ನು ಪುಷ್ಟೀಕರಿಸುವಂತಹ ಯಾವುದೇ ಮೌಖಿಕ ಅಥವಾ ಲಿಖಿತ ಸಾಕ್ಷ್ಯಾಧಾರಗಳನ್ನು ಪೂರೈಸಿರುವುದಿಲ್ಲ. ಹೀಗಾಗಿ ಅಭಿಯೋಜನೆಯು ಆರೋಪಿ ವಿರುದ್ಧ ಆರೋಪಿಸಲಾದ ಆರೋಪಗಳನ್ನು ನಿಸ್ಸಂಶಯವಾಗಿ ಸಾಬೀತುಪಡಿಸಲು ವಿಫಲವಾಗಿದೆ. ಆದಕಾರಣ, ಕಾನೂನಿನಲ್ಲಿ ಇತ್ಯರ್ಥವಾದ ತತ್ವಗಳ ಪ್ರಕಾರ ಆರೋಪಿಗೆ ಸಂಶಯದ ಲಾಭ ನೀಡಿ, ಮೇಲಿನ ಅಂಶವನ್ನು ನಕಾರಾತ್ಮಕವಾಗಿ ಉತ್ತರಿಸಿದ್ದೇನೆ.

14. **ಅಂಶ**.2: ಮೇಲೆ ಹೇಳಿದ ಕಾರಣಗಳು ಮತ್ತು ಮೇಲಿನ ಅಂಶಕ್ಕೆ ನೀಡಿದ ಉತ್ತರದಿಂದಾಗಿ, ನಾನು ಈ ಕೆಳಕಂಡಂತೆ ಮಾಡುವ

## ಆದೇಶ

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಆರೋಪಿ ವಿರುದ್ಧ

ಆರೋಪಿಸಲಾದ ಭಾ.ದಂ.ಸಂ. ಕಲಂ.498(ಎ) ರಡಿ ಅಪರಾಧದಿಂದ ದೋಷಮುಕ್ತಗೊಳಿಸಿ ಬಿಡುಗಡೆ ಮಾಡಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಪ್ರಕಾರ ಆರೋಪಿ ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆಯು ಆರು ತಿಂಗಳುಗಳ ನಂತರ ರದ್ದುಗೊಳ್ಳತಕ್ಕದ್ದು.

(ಶೀಘ್ರಲಿಪಿಗಾರರಿಗೆ ನೇರವಾಗಿ ಗಣಕಯಂತ್ರಕ್ಕೆ ಅಳವಡಿಸುವಂತೆ ಉಕ್ತಲೇಖನ ಕೊಟ್ಟಿದ್ದು ಅವರು ಅದನ್ನು ಗಣಕಯಂತ್ರಕ್ಕೆ ಅಳವಡಿಸಿ, ತೆಗೆದುಕೊಟ್ಟ ತೀರ್ಪನ್ನು ಓದಿ, ತಿದ್ದುಪಡಿ ಮಾಡಿ ದಿಃ 08.05.2026 ರಂದು ತೆರೆದ ನ್ಯಾಯಾಲಯದಲ್ಲಿ ಘೋಷಿಸಿದೆ)

RANGEGOWDA CHIDANANDA

Digitally signed by RANGEGOWDA CHIDANANDA
Date: 2026.05.08 11:54:20 +0530

**(ರಂಗೇಗೌಡ.ಸಿ)**
**ಮುಖ್ಯ ನ್ಯಾಯಿಕ ದಂಡಾಧಿಕಾರಿ,**
**ಬೆಂಗಳೂರು ನಗರ**

## ಅ ನು ಬಂ ಧ

**ಅಭಿಯೋಜನೆ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಃ**

ಪ್ರಾಸಾ.1 – ಕುಮಾರಿ ಬಿನ್ ನಟರಾಜು

**ಅಭಿಯೋಜನೆ ಪರ ಗುರುತಿಸಲಾದ ನಿಶಾನೆಃ**

| | | |
|---|---|---|
| ನಿ.ಪಿ.1 | – | ದೂರು |
| ನಿ.ಪಿ.1(ಎ) | – | ಪ್ರಾ.ಸಾ.1 ರವರ ಸಹಿ |
| ನಿ.ಪಿ.2 | – | ಪಂಚನಾಮೆ |

ನಿ.ಪಿ.2(ಎ) – ಫ್ರಾ.ಸಾ.1 ರವರ ಸಹಿ

ನಿ.ಪಿ.3 – ಫ್ರಾಸಾ 1 ರವರ ಮರುಹೇಳಿಕೆ

**ಅಭಿಯೋಜನೆ ಪರ ಗುರುತಿಸಲಾದ ಮುದ್ದೆ ಮಾಲುಃ**

ಇಲ್ಲ

**ಆರೋಪಿ ಪರ ವಿಚಾರಣೆ ಮಾಡಲ್ಪಟ್ಟ ಸಾಕ್ಷಿಃ**

ಇಲ್ಲ

**ಆರೋಪಿ ಪರ ಗುರುತಿಸಲಾದ ನಿಶಾನೆಃ**

ಇಲ್ಲ

**ಮುಖ್ಯ ನ್ಯಾಯಿಕ ದಂಡಾಧಿಕಾರಿ,**
**ಬೆಂಗಳೂರು ನಗರ**

08-05-2026

ಪ್ರತ್ಯೇಕವಾಗಿ ತಯಾರಿಸಲಾದ ತೀರ್ಪನ್ನು
ಘೋಷಿಸಿದ್ದು ಅಂತಿಮ ಆದೇಶ ಈ ಕೆಳಕಂಡಂತಿರುತ್ತದೆ.

**ಆದೇಶ**

ದಂಡ ಪ್ರಕ್ರಿಯಾ ಸಂಹಿತೆ ಕಲಂ 248(1) ರಡಿಯಲ್ಲಿ ಪ್ರದತ್ತವಾದ ಅಧಿಕಾರದ ಮೇರೆಗೆ ಆರೋಪಿ ವಿರುದ್ಧ ಆರೋಪಿಸಲಾದ ಭಾ.ದಂ.ಸಂ. ಕಲಂ.498(ಎ) ರಡಿ ಅಪರಾಧದಿಂದ ದೋಷಮುಕ್ತಗೊಳಿಸಿ ಬಿಡುಗಡೆ ಮಾಡಿದೆ.

ದಂಡ ಪ್ರಕ್ರಿಯಾ ಸಂಹಿತೆ ಕಲಂ 437(ಎ)ರ ಪ್ರಕಾರ ಆರೋಪಿ ಬರೆದು ಕೊಟ್ಟಿರುವ ಜಾಮೀನು ಮುಚ್ಚಳಿಕೆಯು ಆರು ತಿಂಗಳುಗಳ ನಂತರ ರದ್ದುಗೊಳ್ಳತಕ್ಕದ್ದು.

**ಮುಖ್ಯ ನ್ಯಾಯಿಕ ದಂಡಾಧಿಕಾರಿ,**
**ಬೆಂಗಳೂರು ನಗರ**